# ಡಾ. ಟಿ. ಆರ್. ಅನಂತರಾಮು ಜನಪ್ರಿಯ ವಿಜ್ಞಾನ ಪುಸ್ತಕ ಪ್ರಶಸ್ತಿ

## ಮಾರ್ಗಸೂಚಿ

ಕನ್ನಡದಲ್ಲಿ ಜನಪ್ರಿಯ ವಿಜ್ಞಾನ ಪುಸ್ತಕಗಳ ಬರವಣಿಗೆಯನ್ನು ಪ್ರೋತ್ಸಾಹಿಸಲು ಅನುವು ಮಾಡಿಕೊಡುವ ಸಲುವಾಗಿ ಡಾ. ಟಿ. ಆರ್. ಅನಂತರಾಮು ಕುಟುಂಬ ಮತ್ತು ಡಾ. ಸುಕನ್ಯ ಸೂನಗಹಳ್ಳಿ ರವರುಗಳು ಜಂಟಿಯಾಗಿ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯಲ್ಲಿ ಡಾ. ಟಿ. ಆರ್. ಅನಂತರಾಮು ಅವರ ಹೆಸರಿನಲ್ಲಿ ವಿಜ್ಞಾನ ದತ್ತಿನಿಧಿಯನ್ನು ಸ್ಥಾಪಿಸಿದ್ದು, ಪ್ರತಿ ವರ್ಷ ಕನ್ನಡದಲ್ಲಿ ಪ್ರಕಟವಾದ ಜನಪ್ರಿಯ ವಿಜ್ಞಾನ ಕೃತಿಯನ್ನು ಆಯ್ಕೆ ಮಾಡಿ **ಡಾ. ಟಿ. ಆರ್. ಅನಂತರಾಮು ಜನಪ್ರಿಯ ವಿಜ್ಞಾನ ಪುಸ್ತಕ ಪ್ರಶಸ್ತಿಯನ್ನು** ನೀಡಲಾಗುವುದು.

**ಸನ್ಮಾನ ಮತ್ತು ಪುರಸ್ಕಾರ**

ಆಯ್ಕೆಯಾದ ಪುಸ್ತಕದ ಲೇಖಕರಿಗೆ ರೂ. 20 ಸಾವಿರಗಳ ನಗದು ಪುರಸ್ಕಾರ ಹಾಗೂ ಅಭಿನಂದನಾ ಪತ್ರವನ್ನು ನೀಡಿ ಸನ್ಮಾನಿಸಲಾಗುವುದು.

**ಪುಸ್ತಕಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ** : **ನವೆಂಬರ್ 30, 2026**

**ಪುರಸ್ಕಾರಕ್ಕೆ ಪುಸ್ತಕಗಳನ್ನು ಕಳುಹಿಸುವ ವಿಧಾನ**: ಪುಸ್ತಕಗಳನ್ನು ಕಳುಹಿಸಲು ಬಯಸುವ ಲೇಖಕರು ಪುಸ್ತಕದ ನಾಲ್ಕು ಪ್ರತಿಗಳನ್ನು ಭರ್ತಿಮಾಡಿದ ಅರ್ಜಿಯೊಂದಿಗೆ ಈ ಕೆಳಕಂಡ ವಿಳಾಸಕ್ಕೆ ಕಳುಹಿಸುವುದು:

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಪ್ರೊ. ಯು. ಆರ್. ರಾವ್ ವಿಜ್ಞಾನ ಭವನ, ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ, ತೋಟಗಾರಿಕೆ ವಿಜ್ಞಾನಗಳ ಕಾಲೇಜು ಆವರಣ, ದೊಡ್ಡಬೆಟ್ಟಹಳ್ಳಿ ಬಡಾವಣೆ ಬಸ್ ನಿಲ್ದಾಣದ ಹತ್ತಿರ, ವಿದ್ಯಾರಣ್ಯಪುರ ಪೋಸ್ಟ್, ಬೆಂಗಳೂರು - 560 097.

**ಅರ್ಹತೆ ಮತ್ತು ಆಯ್ಕೆ ಮಾಡುವಾಗ ಪರಿಗಣಿಸಲಾಗುವ ಅಂಶಗಳು**

- ಪುಸ್ತಕಗಳು ಶುದ್ಧ ವಿಜ್ಞಾನ, ಖಗೋಳ, ಪರಿಸರ ಮತ್ತು ಕೃಷಿಗೆ ಸಂಬಂಧಿಸಿದ ಕೃತಿಗಳಾಗಿರಬೇಕು.
- ತಂತ್ರಜ್ಞಾನ, ವೈದ್ಯಕೀಯ, ಮಕ್ಕಳ ಸಾಹಿತ್ಯ ಮತ್ತು ಯಾವುದೇ ಅನುವಾದಿತ ಕೃತಿಗಳನ್ನು ಪರಿಗಣಿಸಲಾಗುವುದಿಲ್ಲ.
- ವಯೋಮಿತಿ: 25 ರಿಂದ 60 ವರ್ಷದೊಳಗಿನವರಾಗಿರಬೇಕು.
- **ಕಳೆದ ಎರಡು ವರ್ಷಗಳು, ಅಂದರೆ 2024ರ ನವೆಂಬರ್ ನಿಂದ 2026ರ ನವೆಂಬರ್** ವರೆಗೆ ಕನ್ನಡದಲ್ಲಿ ಪ್ರಕಟಿಸಿರುವ ಪುಸ್ತಕಗಳು ಅರ್ಹ.
- ಯಾವುದೇ ತರಗತಿ, ಪದವಿ-ಪೂರ್ವ, ಪದವಿ, ಸ್ನಾತಕೋತ್ತರ ಪದವಿ ಅಥವಾ ಇನ್ನಿತರ ಯಾವುದೇ ಕೋರ್ಸ್ ಗಳ ಪಠ್ಯ ಪುಸ್ತಕಗಳು ಅನರ್ಹವಾಗಿದ್ದು, ಬಹುಮಾನಕ್ಕೆ ಪರಿಗಣಿಸಲಾಗುವುದಿಲ್ಲ.
- ಮುದ್ರಣ ರೂಪ (Printed) ದಲ್ಲಿರುವ ಪುಸ್ತಕಗಳನ್ನು ಮಾತ್ರ ಪರಿಗಣಿಸುವುದು. ಕೈಬರಹ, ಡಿಜಿಟಲ್ ಅಥವಾ ಆಡಿಯೋ ವಿಜುಯಲ್ ಪುಸ್ತಕಗಳನ್ನು ಪರಿಗಣಿಸಲಾಗುವುದಿಲ್ಲ.
- ಚಾಟ್ ಜಿಪಿಟಿ ಮತ್ತು ಇನ್ನಾವುದೇ ಕೃತಕ ಬುದ್ಧಿಮತ್ತೆ ತಂತ್ರಾಂಶಗಳನ್ನು ಉಪಯೋಗಿಸಿ ರಚಿಸಲಾದ ಕೃತಿಗಳನ್ನು ಪರಿಗಣಿಸಲಾಗುವುದಿಲ್ಲ. ಪ್ರಶಸ್ತಿಗೆ ಆಯ್ಕೆಯಾಗಿ ಕೃತಕ ಬುದ್ಧಿಮತ್ತೆಯಿಂದ ರಚಿಸಲಾದ ಕೃತಿಯೆಂದು ಕಂಡು ಬಂದರೆ ಪ್ರಶಸ್ತಿಯನ್ನು ಹಿಂಪಡೆಯಲಾಗುವುದು.
- ಈಗಾಗಲೇ ಪ್ರಕಟಗೊಂಡಿರುವ ಪುಸ್ತಕದ ಸಂಕ್ಷಿಪ್ತ/ಮುಖ್ಯಾಂಶ/ಲೇಖನಗಳ ಸಂಗ್ರಹ ಅಥವಾ ಆಯ್ದ ಭಾಗಗಳನ್ನು ಒಳಗೊಂಡ ಪುಸ್ತಕವು ಬಹುಮಾನಕ್ಕೆ ಅರ್ಹವಾಗಿರುವುದಿಲ್ಲ.

- ಹಲವು ಲೇಖಕರ ಸಂಶೋಧನಾ ಪತ್ರ (Research Paper)/ ಲೇಖನಗಳನ್ನು (Articles) ಒಳಗೊಂಡು ಸಂಪಾದಕ ಗ್ರಂಥ ಅಥವಾ ಪುಸ್ತಕಗಳು ಅರ್ಹವಾಗಿರುವುದಿಲ್ಲ.
- ಪುಸ್ತಕ ಪ್ರಾಧಿಕಾರ, ಕನ್ನಡ ಸಾಹಿತ್ಯ ಪರಿಷತ್ ಅಥವಾ ಇನ್ನಾವುದೇ ಸಂಸ್ಥೆಗಳ ಪ್ರಶಸ್ತಿ/ಪುರಸ್ಕಾರಕ್ಕೆ ಆಯ್ಕೆಗೊಂಡ ಪುಸ್ತಕಗಳನ್ನು ಪರಿಗಣಿಸುವುದಿಲ್ಲ.
- ಸರ್ಕಾರಿ ವರದಿಗಳು ಮತ್ತು ಇಲಾಖೆಗಳು/ವಿಭಾಗಗಳು ನಿಯಮಿತವಾಗಿ/ವಾಡಿಕೆಯಾಗಿ ಹೊರತರುತ್ತಿರುವ ಲೇಖನಗಳು/ವರದಿಗಳು ಇತ್ಯಾದಿಗಳನ್ನು ಪರಿಗಣಿಸುವುದಿಲ್ಲ.
- ಪದ ಕೋಶ ಮತ್ತು ಅನುವಾದಿತ ಕೃತಿಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ.
- ಅಪರಾಧ ಹಿನ್ನೆಲೆಯಲ್ಲಿ ಆರೋಪಕ್ಕೊಳಪಟ್ಟಿರುವ/ ವಿಚಾರಣೆಗೊಳಪಟ್ಟಿರುವ/ ಕಾನೂನು ಕ್ರಮ ಎದುರಿಸುತ್ತಿರುವ/ಶಿಕ್ಷೆಗೊಳಪಟ್ಟಿರುವ ಅಥವಾ ಇನ್ನಿತರ ಸಮಾಜ ಬಾಹಿರ ಕ್ರಿಯೆಯಲ್ಲಿ ಪಾಲ್ಗೊಂಡಿರುವ ಲೇಖಕರು ಅರ್ಜಿ ಸಲ್ಲಿಸಲು ಅನರ್ಹರಾಗಿರುತ್ತಾರೆ. ಒಂದು ವೇಳೆ ಲೇಖಕರು ಬಹುಮಾನಕ್ಕೆ ಆಯ್ಕೆಯಾಗಿ ಅಕಾಡೆಮಿಯು ಪ್ರಕಟಿಸಿದ ನಂತರ ಲೇಖಕರು ಮೇಲ್ಕಂಡ ಅನರ್ಹತೆ ಹೊಂದಿರುವ ಬಗ್ಗೆ ತಿಳಿದು ಬಂದರೆ ಅಂತವರಿಗೆ ಬಹುಮಾನವನ್ನು ನೀಡಲಾಗುವುದಿಲ್ಲ.
- ಈ ಬಹುಮಾನದ ಪಾವಿತ್ರತೆಯನ್ನು ಕಾಪಾಡುವಲ್ಲಿ ಲೇಖಕರು ಸಹಕರಿಸುವುದು. ಯಾವುದೇ ರೀತಿಯಾದ ಪ್ರಭಾವ/ಮಧ್ಯಸ್ತಿಕೆ ವಹಿಸುವ ಲೇಖಕರನ್ನು ಯಾವುದೇ ಮುನ್ಸೂಚನೆ ಇಲ್ಲದೆ ಅನರ್ಹಗೊಳಿಸಲಾಗುವುದು.
- ಬಹುಮಾನಕ್ಕೆ ಸಲ್ಲಿಕೆಯಾದ ಪುಸ್ತಕಗಳನ್ನು ಅಕಾಡೆಮಿಯ ತಜ್ಞ ಸಮಿತಿಯು ಅಕಾಡೆಮಿಯ ಮಾರ್ಗಸೂಚಿಯ ಪ್ರಕಾರ ಮೌಲ್ಯಮಾಪನ ಮಾಡಿಸಲಾಗುವುದು.
- ಬಹುಮಾನಕ್ಕೆ ಪುಸ್ತಕಗಳನ್ನು ಆಯ್ಕೆ ಮಾಡುವಾಗ ಪರಿಗಣಿಸಬೇಕಾದ ಮಾನದಂಡಗಳು ಈ ಕೆಳಕಂಡಂತಿವೆ:

| ಮೌಲ್ಯಮಾಪನದ ಮಾನದಂಡ ಮತ್ತು ಅಂಕಗಳು | | | |
|---|---|---|---|
| ಉಪಯುಕ್ತತೆ (ಗರಿಷ್ಠ 50 ಅಂಕ) | ಸ್ವಂತಿಕೆ (ಗರಿಷ್ಠ 30 ಅಂಕ) | ಸರಳತೆ (ಗರಿಷ್ಠ 20 ಅಂಕ) | ಒಟ್ಟು ಅಂಕಗಳು (100) |

ಉಪಯುಕ್ತತೆ: ಪುಸ್ತಕವು ಜನಸಾಮಾನ್ಯರಿಗೆ ಉಪಯೋಗವಾಗಲಿದೆಯೇ. ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಗೆ ಹಾಗೂ ಜನಜೀವನ ಮಟ್ಟದಲ್ಲಿ ಸುಧಾರಣೆಯಾಗಲಿದೆಯೇ. ವಿಜ್ಞಾನ ಮತ್ತು ತಂತ್ರಜ್ಞಾನ ಸಂವಹನಕ್ಕೆ ಸಹಕಾರಿಯಾಗಿದೆಯೇ.

ಸ್ವಂತಿಕೆ :ಪುಸ್ತಕದ ವಿಷಯದಲ್ಲಿ ಸ್ವಂತಿಕೆಯಿದೆಯೇ. ವಿಷಯದ ಮಂಡನೆಗೆ/ಸಂವಹನಕ್ಕೆ/ದೃಢೀಕರಣಕ್ಕೆ ಸ್ವಂತ ಸಂಶೋಧನೆಯ ಅಂಕಿ ಅಂಶಗಳನ್ನು ಉಪಯೋಗಿಸಲಾಗಿದೆಯೇ.

ಸರಳತೆ : ಪುಸ್ತಕವನ್ನು ಜನಸಾಮಾನ್ಯರ ಮಟ್ಟಕ್ಕೆ ಸರಳವಾಗಿ ಬರೆಯಲಾಗಿದೆಯೇ. ಭಾಷೆಯ ಶೈಲಿ, ವಾಕ್ಯಗಳ ರಚನೆ, ಪದಗಳ ಬಳಕೆ ಮತ್ತು ವಿಷಯದ ಸಂವಹನ ತಂತ್ರ ಇವುಗಳಲ್ಲಿ ಎಷ್ಟರ ಮಟ್ಟಿಗೆ ಲೇಖಕರು ಯಶಸ್ವಿಯಾಗಿದ್ದಾರೆ.